ಕರ್ನಾಟಕ ವಿಧಾನ ಪರಿಷತ್ತು

| | | |
|---|---|---|
| ಮಾನ್ಯ ಸದಸ್ಯರ ಹೆಸರು | : | ಡಾ: ಸೂರಜ್ ರೇವಣ್ಣ (ಸ್ಥಳೀಯ ಸಂಸ್ಥೆಗಳ ಕ್ಷೇತ್ರ) |
| ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ | : | 250 |
| ಉತ್ತರಿಸುವ ದಿನಾಂಕ | : | 15.02.2024 |
| ಉತ್ತರಿಸುವ ಸಚಿವರು | : | ಮಾನ್ಯ ಕಾರ್ಮಿಕ ಸಚಿವರು |

| ಕ್ರ. ಸಂ. | ಪ್ರಶ್ನೆ | ಉತ್ತರ |
|---|---|---|
| ಅ) | ರಾಜ್ಯದಲ್ಲಿ ಬೀಡಿ ಕಟ್ಟುವ ಕಂಪನಿಗೆ ಒಳಪಡುವ ಕಾರ್ಮಿಕರು ಮತ್ತು ಕಂಪನಿಗಳ ಕೆಲಸ ಗುತ್ತಿಗೆ ಪಡೆದ ಕಾರ್ಮಿಕರ ಸಂಖ್ಯೆ ಎಷ್ಟು; (ವಿವರ ನೀಡುವುದು) | ರಾಜ್ಯದಲ್ಲಿ ಬೀಡಿ ಕಟ್ಟುವ ಕಂಪನಿಗೆ ಒಳಪಡುವ ಕಾರ್ಮಿಕರು ಮತ್ತು ಕಂಪನಿಗಳ ಕೆಲಸ ಗುತ್ತಿಗೆ ಪಡೆದ ಕಾರ್ಮಿಕರ ಸಂಖ್ಯೆಯ ಕುರಿತು ಜಿಲ್ಲಾವಾರು ಮಾಹಿತಿಯನ್ನು ಅನುಬಂಧ-1ರಲ್ಲಿ ಒದಗಿಸಿದೆ. |
| ಆ) | ಈ ಕಾರ್ಮಿಕರಿಗೆ ಸರ್ಕಾರದಿಂದ ಒದಗಿಸುವ ಸವಲತ್ತುಗಳೇನು; (ವಿವರ ನೀಡುವುದು) | ಕಾರ್ಮಿಕ ಇಲಾಖೆಯ ಅಧೀನದಲ್ಲಿ ಕಾರ್ಯ ನಿರ್ವಹಿಸುತ್ತಿರುವ ಕರ್ನಾಟಕ ರಾಜ್ಯ ಅಸಂಘಟಿತ ಕಾರ್ಮಿಕರ ಸಾಮಾಜಿಕ ಭದ್ರತಾ ಮಂಡಳಿಯಿಂದ ಬೀಡಿ ಕಟ್ಟುವ ಕಾರ್ಮಿಕರಿಗೆ ಯಾವುದೇ ಪ್ರತ್ಯೇಕ ಸೌಲಭ್ಯಗಳನ್ನು ಒದಗಿಸುತ್ತಿರುವುದಿಲ್ಲ. ಆದರೆ, ಕೇಂದ್ರ ಸರ್ಕಾರದ ಪ್ರಧಾನ ಮಂತ್ರಿ ಶ್ರಮ ಯೋಗಿ ಮಾನ್‌ಧನ್ ಯೋಜನೆಯಡಿ 18-40 ವಯೋಮಾನದ ಅಸಂಘಟಿತ ಕಾರ್ಮಿಕರು ವಂತಿಕೆದಾರರಾಗಿ ನೋಂದಾಯಿಸಿಕೊಂಡು 60 ವರ್ಷ ಪೂರೈಸಿದ ನಂತರ ಮಾಸಿಕ ನಿಶ್ಚಿತ ರೂ. 3,000/-ಗಳ ಪಿಂಚಣಿ ಸೌಲಭ್ಯ ಪಡೆಯಬಹುದಾಗಿದೆ. ಬೀಡಿ ಕಟ್ಟುವ ಕಾರ್ಮಿಕರು ಅಸಂಘಟಿತ ವಲಯದ ಕಾರ್ಮಿಕರಾಗಿದ್ದು, ಈ ಯೋಜನೆಯಡಿ ವಂತಿಕೆದಾರರಾಗಿ ನೋಂದಾಯಿಸಿಕೊಂಡು ಪಿಂಚಣಿ ಸೌಲಭ್ಯ ಪಡೆಯಬಹುದಾಗಿದೆ ಹಾಗೂ ಬೀಡಿ ಕಾರ್ಮಿಕರಿಗಾಗಿ ಸ್ಥಾಪಿಸಿರುವ ಡಿಸ್ಪೆನ್ಸರಿಗಳಲ್ಲಿ ವೈದ್ಯಕೀಯ ಸೌಲಭ್ಯವನ್ನು ಪಿಎಫ್ ಸೌಲಭ್ಯವನ್ನು ಹಾಗೂ ಶಾಸನಾತ್ಮಕ ಸೌಲಭ್ಯಗಳನ್ನು ಒದಗಿಸಲಾಗುತ್ತದೆ. |
| ಇ) | ರಾಜ್ಯದಲ್ಲಿ ತಂಬಾಕು ಉತ್ಪನ್ನ ಮಾರಾಟ ಮಾಡುವ ಕಂಪನಿಗಳು ತಮ್ಮ ಅಧೀನ ಕಾರ್ಮಿಕರಿಗೆ ಕಾಲ ಕಾಲಕ್ಕೆ ಸಂಬಳ ಮತ್ತು ಬೋನಸ್ ನೀಡದೇ ಕಾರ್ಮಿಕರನ್ನು ಶೋಷಿಸುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ; ಬಂದಿದ್ದಲ್ಲಿ, ಸರ್ಕಾರ ಇಂತಹ ಕಾರ್ಮಿಕರಿಗೆ ಹೆಚ್ಚಿನ ನೆರವನ್ನು ಒದಗಿಸುವಲ್ಲಿ ಕ್ರಮ ವಹಿಸುವುದೇ; (ವಿವರ ನೀಡುವುದು) | ರಾಜ್ಯದಲ್ಲಿ ತಂಬಾಕು ಉತ್ಪನ್ನ ಮಾರಾಟ ಮಾಡುವ ಕಂಪನಿಗಳು ತಮ್ಮ ಅಧೀನ ಕಾರ್ಮಿಕರಿಗೆ ಕಾಲ ಕಾಲಕ್ಕೆ ಸಂಬಳ ಮತ್ತು ಬೋನಸ್ ನೀಡದೇ ಕಾರ್ಮಿಕರನ್ನು ಶೋಷಿಸುತ್ತಿರುವ ಬಗ್ಗೆ ಇತ್ತೀಚಿಗೆ ಯಾವುದೇ ದೂರು ಇಲಾಖೆಯಲ್ಲಿ ದಾಖಲಾಗಿರುವುದಿಲ್ಲ. ಆದರೆ 2010ರಲ್ಲಿ ಬೀಡಿ ಕಾರ್ಮಿಕರಿಗೆ ಸಂಬಂಧಿಸಿದಂತೆ ಕಲ್ಬುರ್ಗಿ ಪ್ರಾದೇಶಿಕ ವ್ಯಾಪ್ತಿಯಲ್ಲಿ ವೇತನ ಪಾವತಿ ಕಾಯ್ದೆ 1936ರಡಿಯಲ್ಲಿ ಒಂದು ಕ್ಲೈಂ ಅರ್ಜಿ ಸ್ವೀಕೃತವಾಗಿದ್ದು 2023-24ರ ಸಾಲಿನಲ್ಲಿ ವಿಲೇವಾರಿಯಾಗಿರುತ್ತದೆ. ಕ್ಲೈಂ ಮೊತ್ತ ರೂ 2,26,126.00 ಆದೇಶಿಸಲಾಗಿದ್ದು, 44 ಕಾರ್ಮಿಕರು ಪ್ರಯೋಜನ ಪಡೆದಿರುತ್ತಾರೆ.<br>ಇಲಾಖೆಯ ಅಧಿಕಾರಿಗಳು ನಿರಂತರವಾಗಿ ವಿವಿದ ಕಾರ್ಮಿಕ ಕಾಯ್ದೆಗಳಡಿ ತಪಾಸಣೆ ಕೈಗೊಳ್ಳುತ್ತಿದ್ದು, ಸಂಬಳ ವಿಳಂಬ, ಕನಿಷ್ಟ ವೇತನ ನೀಡದಿರುವ ಬಗ್ಗೆ, ಬೋನಸ್ ನೀಡದಿರುವ ಬಗ್ಗೆ ಕ್ರಮವಹಿಸುತ್ತಿದ್ದಾರೆ ಹಾಗೂ ಇಂತಹ ಪ್ರಕರಣಗಳು ಕಂಡುಬಂದಲ್ಲಿ ಕಾಯ್ದೆಗಳ ಅನ್ವಯ ಸೂಕ್ತ ಕ್ರಮ ಕೈಗೊಳ್ಳಲಾಗುವುದು. |

| | | |
|---|---|---|
| ಈ) | ರಾಜ್ಯದಲ್ಲಿ ತಂಬಾಕು ಮತ್ತು ತಂಬಾಕು ಉತ್ಪನ್ನ ತಯಾರಿಕೆ ಮತ್ತು ಮಾರಾಟ ಮಾಡುವುದನ್ನು ನಿರ್ಬಂಧಗೊಳಿಸುವ ಯೋಜನೆ ಸರ್ಕಾರದ ಹಂತದಲ್ಲಿದೆಯೇ; ಹಾಗಿದ್ದಲ್ಲಿ, ಬೀಡಿ ಕಟ್ಟುವ ಮತ್ತು ತಂಬಾಕು ತಯಾರಿಕೆ ಮಾಡುವ ಕಾರ್ಮಿಕರ ಹಿತರಕ್ಷಣೆ ಬಗ್ಗೆ ಸರ್ಕಾರ ಜಾಗೃತೆ ವಹಿಸುವುದೇ? (ವಿವರ ನೀಡುವುದು) | ರಾಜ್ಯದಲ್ಲಿ ತಂಬಾಕು ಮತ್ತು ತಂಬಾಕು ಉತ್ಪನ್ನ ತಯಾರಿಕೆ ಮತ್ತು ಮಾರಾಟ ಮಾಡುವುದನ್ನು ನಿರ್ಬಂಧಗೊಳಿಸುವ ಕುರಿತು ಯಾವುದೇ ಪ್ರಸ್ತಾವನೆ ಸರ್ಕಾರದಲ್ಲಿ ಸ್ವೀಕೃತವಾಗಿರುವುದಿಲ್ಲ.<br><br>ಭವಿಷ್ಯದಲ್ಲಿ ತಂಬಾಕು ಮತ್ತು ತಂಬಾಕು ಉತ್ಪನ್ನ ತಯಾರಿಕೆ ಮತ್ತು ಮಾರಾಟ ಮಾಡುವುದನ್ನು ನಿರ್ಬಂಧಗೊಳಿಸುವ ಯೋಜನೆ ಜಾರಿಯಾದರೆ ಕಾಲಕ್ಕನುಗುಣವಾಗಿ ಈ ವಲಯದ ಕಾರ್ಮಿಕರ ಸಾಮಾಜಿಕ ಭದ್ರತೆ ಮತ್ತು ಹಿತರಕ್ಷಣೆಗೆ ಕಾಯ್ದೆಯನ್ವಯ ಸೂಕ್ತ ಕ್ರಮ ಕೈಗೊಳ್ಳಲಾಗುವುದು. |

ಸಂಖ್ಯೆ: ಕಾಇ 62 ಎಲ್ ಡಬ್ಲ್ಯೂಎ 2024

(ಸಂತೋಷ್ ಎಸ್. ಲಾಡ್)
ಕಾರ್ಮಿಕ ಸಚಿವರು

## ವಿಧಾನ ಪರಿಷತ್ತಿನ ಮಾನ್ಯ ಸದಸ್ಯರಾದ ಡಾ|| ಸೂರಜ್ ರೇವಣ್ಣ (ಸ್ಥಳೀಯ ಸಂಸ್ಥೆಗಳ ಕ್ಷೇತ್ರ) ) ಇವರ ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ: 250 (321) ಕ್ಕೆ

### ಅನುಬಂಧ

| ಕ್ರ.ಸಂ. | ಜಿಲ್ಲೆಯ ಹೆಸರು | ಬೀಡಿ ಕಾರ್ಖಾನೆಗಳ ಸಂಖ್ಯೆs | ಬೀಡಿ ಕಾರ್ಖಾನೆಗಳ ಖಾಯಂ ನೌಕರರ ಸಂಖ್ಯೆ | | | ಬೀಡಿ ಕಾರ್ಖಾನೆಗಳಲ್ಲಿ ಗುತ್ತಿಗೆ ಆಧಾರದಲ್ಲಿ ಕಾರ್ಯನಿರ್ವಹಿಸುತ್ತಿರುವ ಒಟ್ಟು ಕಾರ್ಮಿಕರ ಸಂಖ್ಯೆ | | | ಪರವಾನಿಗೆಯನ್ನು ಪಡೆದ ಗುತ್ತಿಗೆದಾರರ ಸಂಖ್ಯೆ | ಐಡಿ ಕಾರ್ಡ್ ಪಡೆದ ಕಾರ್ಮಿಕರ ಸಂಖ್ಯೆ |
|---|---|---|---|---|---|---|---|---|---|---|
| | | | ಪುರುಷ | ಮಹಿಳೆ | ಒಟ್ಟು | ಪುರುಷ | ಮಹಿಳೆ | ಒಟ್ಟು | | |
| **1** | **2** | **3** | | **5** | **6** | **7** | **8** | **9** | **10** | **11** |
| 1 | ಬೆಳಗಾವಿ | 5 | 36 | - | 36 | 11 | 101 | 112 | 3 | - |
| 2 | ವಿಜಯಪುರ | - | - | - | - | - | - | - | - | |
| 3 | ಬಾಗಲಕೋಟೆ | - | - | - | - | - | - | - | - | - |
| 4 | ಧಾರವಾಡ | 16 | 25 | - | 25 | 63 | 403 | 466 | 16 | 25 |
| 5 | ಹಾವೇರಿ | 48 | 64 | - | 64 | 369 | 527 | 896 | 48 | 64 |
| 6 | ಗದಗ | - | - | - | - | - | - | - | - | - |
| 7 | ಕಾರವಾರ | - | - | - | - | - | - | - | - | - |
| 8 | ದಕ್ಷಿಣ ಕನ್ನಡ | 106 | 7784 | 186175 | 193959 | - | - | - | 3602 | 193959 |
| 9 | ಉಡುಪಿ | 18 | 6042 | 32674 | 38716 | - | - | - | 516 | 38716 |

| | | | | | | | | | | |
|---|---|---|---|---|---|---|---|---|---|---|
| 10 | ಶಿವಮೊಗ್ಗ | 20 | 342 | 632 | 974 | - | - | - | 0 | 974 |
| 11 | ಮಡಿಕೇರಿ | - | - | - | - | - | - | - | - | - |
| 12 | ಚಿಕ್ಕಮಗಳೂರು | - | - | - | - | - | - | - | - | |
| 13 | ಹಾಸನ | - | - | - | - | - | - | - | - | - |
| 14 | ತುಮಕೂರು | 3 | 13 | 0 | 13 | 125 | 618 | 743 | 33 | 743 |
| 15 | ರಾಮನಗರ | 1 | 7 | 0 | 7 | 90 | 371 | 461 | 19 | 461 |
| 16 | ಬೆಂಗಳೂರು | - | - | - | - | - | - | - | - | - |
| 17 | ಬೆಂಗಳೂರು ಗ್ರಾಮಾಂತರ | - | - | - | - | - | - | - | - | - |
| 18 | ಕಲುಬುರಗಿ | - | - | - | - | - | - | - | - | - |
| 19 | ಬೀದರ್ | - | - | - | - | - | - | - | - | - |
| 20 | ಯಾದಗಿರಿ | 1 | - | - | - | 40 | 60 | 100 | - | - |
| 21 | ರಾಯಚೂರು | - | - | - | - | - | - | - | - | - |
| 22 | ಕೊಪ್ಪಳ | - | - | - | - | - | - | - | - | - |
| 23 | ದಾವಣಗೆರೆ | 3 | 26 | 1 | 27 | 765 | 3234 | 3999 | 85 | 3999 |
| 24 | ಚಿತ್ರದುರ್ಗ | - | - | - | - | - | - | - | - | - |

| | | | | | | | | | | |
|---|---|---|---|---|---|---|---|---|---|---|
| 25 | ಬಳ್ಳಾರಿ | - | - | - | - | - | - | - | - | - |
| 26 | ವಿಜಯನಗರ | - | - | - | - | - | - | - | - | - |
| 27 | ಮೈಸೂರು | - | - | - | - | 2 | 18 | 20 | 20 | - |
| 28 | ಮಂಡ್ಯ | - | - | - | - | - | 3 | 3 | 3 | - |
| 29 | ಚಾಮರಾಜನಗರ | - | - | - | - | 9 | 30 | 39 | 39 | - |
| 30 | ಕೋಲಾರ | 6 | 33 | 30 | 63 | 33 | 30 | 63 | 6 | - |
| ಒಟ್ಟು | | **227** | **14372** | **219512** | **233884** | **1507** | **5395** | **6902** | **4390** | **238941** |